ಅ.ದಾ.ನಂ.156/2020
ಡಿ .ಡಬ್ಲೂ:1

**<u>ಸಾಕ್ಷಿಯನ್ನು ಇಂದು ದಿನಾಂಕಃ 09.01.2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಶ್ರೀ. ಎಮ್ ಎಚ್ ಕೆ , ವಕೀಲರಿಂದ ವಾದಿ ಪರವಾಗಿ</u>**

4. ನಿಪಿ-2ರ ತೀರ್ಪಿನ ಪ್ಯಾರಾ ನಂ.2ರಲ್ಲಿ ನ್ಯಾಯಾಲಯವು ನೀಡಿರುವ ಕಾರಣವು ಸರಿಯಾಗಿ ಇರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಪಿ-2ರ ತೀರ್ಪುನ್ನು ನ್ಯಾಯಾಲಯಹಿ ದಿಃ 16.10.1965ರಂದು ನೀಡಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಪಿ-2ರ ತೀರ್ಪಿನಲ್ಲಿ ನ್ಯಾಯಲಾಯವು ನನ್ನ ಅಜ್ಜನು ದಾವಾ ಆಸ್ತಿಯಲ್ಲಿ ಸ್ವಾಧೀನುಭವದಲ್ಲಿ ಇಲ್ಲ ಎಂದು ನಿರ್ಧರಿಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಪಿ-2 ರ ತೀರ್ಪಿನ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-2ರ ತೀರ್ಪಿನ ವಿರುದ್ಧ ನಾವು ಯಾವುದೇ ಮೇಲ್ಮನವಿಯನ್ನು ಸಲ್ಲಿಸದೇ ಇರುವುದರಿಂದ ಸದರಿ ತೀರ್ಪು ಅಂತಿಮವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

5. ವಾದಿಯರ ತಲೆ ತಲಾಂತರದಿಂದ ವಾದಿಯರೇ ದಾವಾ ಆಸ್ತಿಯಲ್ಲಿ ಸ್ವಾಧಿನಾನುಭವದಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯಲ್ಲಿ ನಾವು ದಾವಾ ಆಸ್ತಿಯಲ್ಲಿ ಸ್ವಾಧೀನುಭವದಲ್ಲಿ ಇರುತ್ತಾರೆ ಎಂದು ಹೇಳುತ್ತಾರೆ. ದಾವಾ ಆಸ್ತಿಯಲ್ಲಿ ನೀವು ಅಥವಾ ನಿಮ್ಮ ತಂದೆಯೋ ನಿಮ್ಮ ಅಜ್ಜನು ಸ್ವಾಧಿನಾನುಭವಕ್ಕೆ ಬಂದಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ಅಜ್ಜನು ದಾವಾ ಆಸ್ತಿಯಲ್ಲಿ ಸ್ವಾಧಿನಾನುಭವಕ್ಕೆ ಬಂದಿರುತ್ತಾರೆ ಎಂದು ಹೇಳುತ್ತಾರೆ. ನಮ್ಮ ಅಜ್ಜನು ದಾವಾ ಆಸ್ತಿಯಲ್ಲಿ ಯಾವ ದಿನಾಂಕದಂದು ದಾವಾ

ಆಸ್ತಿಯಲ್ಲಿ ಸ್ವಾಧಿನಾನುಭವಕ್ಕೆ ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ನಿಮ್ಮ ಅಜ್ಜನು ಯಾವ ನಾತೆಯ ಆಧಾರದ ಮೇಲೆ ಕಬ್ಜೆಯಲ್ಲಿ ಬಂದಿರುತ್ತಾರೆ ಎಂದರೆ ಸಾಕ್ಷಿಯು ಟೆನೆನ್ಸಿ ಆಧಾರದ ಮೇಲೆ ಬಂದಿರುತ್ತಾರೆ ಎಂದು ಹೇಳುತ್ತಾರೆ. ಟೆನೆನ್ಸಿಯ ಆದೇಶವು ಯಾವಾಗ ಆಗಿರುತ್ತದೆ ಎಂಬುದು ನನಗೆ ಗೊತ್ತಿಲ್ಲ. ಟೆನೆನ್ಸಿಯ ಆದೇಶವಾಗಿರುವ ಕುರಿತು ನಾನು ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ.

6. ನಿಡಿ-13ರ ಡ ನಂ.430 ರ ಆದೇಶವು ಖೊಟ್ಟಿಯಾಗಿರುತ್ತದೆ ಎಂದರೆ ಸರಿ. ನನ್ನ ಅಜ್ಜನು ನಿಡಿ-13ರ ಡ ನಂ.430ರ ಆದೇಶವನ್ನು ಕಂದಾಯ ಅಧಿಕಾರಿಗಳೊಂದಿಗೆ ಮಿಲಾಫೆಯಾಗಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿ.ಡಿ-13ರ ಡ ನಂ.430ರ ಪ್ರಕಾರ ನನ್ನ ಅಜ್ಜನಿಗೆ ಯಾವುದೇ ದಾವಾ ಆಸ್ತಿಯ ಕುರಿತು ಯಾವುದೇ ಮಾಲಿಕತ್ವದ ಹಕ್ಕಾಗಗಲೀ ಅಥವಾ ಸ್ವಾಧೀನತೆಯ ಹಕ್ಕಾಗಗಲೀ ಪ್ರಾಪ್ತವಾಗಿಲ್ಲ ಎಂದರೆ ಸರಿಯಲ್ಲ. ನಿ.ಡಿ-13ರ ಡ ನಂ.430ರ ಆದೇಶವನ್ನು ಶೇಶಪ್ಪ ರಾಯಚೂರವರಿಗೆ ಗೊತ್ತಾಗದಂತೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

7. ದಾವಾ ಆಸ್ತಿಗೆ ಸಂಬಂಧಿಸಿದಂತೆ ಫಾರ್ಮ ನಂ.7 ನನ್ನ ಅಜ್ಜನು ತುಂಬಿರುತ್ತಾರೆ. ನನ್ನ ಅಜ್ಜನು ಫಾರ್ಮ ನಂ.7 ನ್ನು ಯಾವ ದಿನಾಂಕದಂದು ತುಂಬಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ನಾನು ಈ ಕುರಿತು ಫಾರ್ಮ ನಂ.7 ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ನ್ಯಾಯಾಲಯಕ್ಕೆ ಯಾವುದೇ ಫಾರ್ಮ ನಂ.7 ನ್ನು ಹಾಜರುಪಡಿಸದೇ ಇದ್ದರೂ ಕೂಡಾ ಹಾಜರು ಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಭೂ ನ್ಯಾಯ ಮಂಡಳಿಯವರು ಮಾಡಿರುವ ಆದೇಶ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಸದರಿ ಆದೇಶ ಪ್ರತಿಯು ನನಗೆ ದೊರೆತಿಲ್ಲ ಎಂದು ಹೇಳುತ್ತಾರೆ.

8. ನಿ.ಡಿ-14 ರಲ್ಲಿಯ ಎಮ್.ಆರ್ ನಂ. 549 ನ್ನು ನನ್ನ ಅಜ್ಜನು ಆಸ್ತಿಯ ಮಾಲೀಕರಿಗೆ ಗೊತ್ತಿಲ್ಲದಂತೆ ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ.ನಿಜವಾಗಿಯು ನಮ್ಮ ಅಜ್ಜನು ದಾವಾ ಆಸ್ತಿಯ ಕುರಿತು ಫಾರ್ಮ ನಂ.7 ನ್ನು ತುಂಬಿದ್ದರೆ ಜಮೀನು ಮಾಲೀಕರಿಗೆ ನೋಟಿಸ್ ಬರುತ್ತಿತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಭೂ ನ್ಯಾಯ ಮಂಡಳಿಯಲ್ಲಿ ದಾವಾ ಆಸ್ತಿಯ ಕುರಿತು ಎಷ್ಟು ವರ್ಷ ಪ್ರಕರಣವು ಚಾಲ್ತಿಯಲ್ಲಿತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಜವಾಗಿಯು ಭೂ ನ್ಯಾಯ ಮಂಡಳಿಯ ಆದೇಶವಾಗಿದ್ದರೆ ಅದಕ್ಕೆ ಸಂಬಂಧಿಸಿದ ದಾಖಲಾತಿಗಳು ಲಭ್ಯ ಇರುತ್ತಿದ್ದವು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

9. ದಾವಾ ಆಸ್ತಿಯ ಕುರಿತು ನಮ್ಮ ಅಜ್ಜನು ತುಂಬಿರುವ ಫಾರ್ಮ ನಂ.7, ಭೂ ನ್ಯಾಯ ಮಂಡಳಿಯ ಆದೇಶ ಮತ್ತು ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ತಹಶೀಲ್ದಾರ ಕಾರ್ಯಾಲಯದ ಅಭಿಲೇಖಾಲಯದವರು ಸ್ವೀಕರಿಸುತ್ತಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ಅಜ್ಜನು ದಾವಾ ಆಸ್ತಿಯ ಕುರಿತು ಫಾರ್ಮ ನಂ.7 ನ್ನು ತುಂಬಿಲ್ಲ ಮತ್ತು ಭೂ ನ್ಯಾಯ ಮಂಡಳಿಯಲ್ಲಿ ಯಾವುದೇ ನಡುವಳಿ ಮತ್ತು ಆದೇಶ ಆಗದೇ ಇದ್ದರೂ ಕೂಡಾ ನನ್ನ ಅಜ್ಜನು ನಿ.ಡಿ-13 ರಿಂದ 15 ರ ಡ ನಂಬರಗಳನ್ನು ಸೃಷ್ಟಿಸಿದ್ದಾನೆ ಎಂದರೆ ಸರಿಯಲ್ಲ. ನಮ್ಮ ಅಜ್ಜನಿಗೆ ಫಾರ್ಮ ನಂ.10 ನ್ನು ಕೊಡದೇ ಇದ್ದರೂ ಕೂಡಾ ವಾದಿಯರಿಗೆ ಗೊತ್ತಾಗದಂತೆ ನಿ.ಡಿ-15 ನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

10. ನಮ್ಮ ಅಜ್ಜನು ದಾವಾ ಆಸ್ತಿಗೆ ಭೂ ನ್ಯಾಯ ಮಂಡಳಿಯ ಆದೇಶ ನಂ. ಟಿ.ಎನ್.ಸಿ. ಎಸ್.ಆರ್-325 ಪ್ರಕಾರ ಮಾಲೀಕನಾಗಿರುತ್ತಾನೆ ಮತ್ತು ದಾವಾ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿ ಇರುತ್ತಾನೆ ಎಂದು ನನ್ನ

ಪ್ರಮಾಣ ಪತ್ರದಲ್ಲಿ ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಅಮರಪ್ಪಗೌಡನ ಮೊಮ್ಮನಾಗಿರುವುದರಿಂದ ನಾನು ದಾವಾ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿ ಬಂದಿರುತ್ತೇನೆಂದು ನನ್ನ ಪ್ರಮಾಣ ಪತ್ರದಲ್ಲಿ ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ.

10. ದಿಃ 20.02.2020 ರಂದು ನಾನು ವಾದಿಯರ ದಾವಾ ಆಸ್ತಿಯ ಸ್ವಾಧೀನಾನುಭವಕ್ಕೆ ತೊಂದರೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಂತರ ವಾದಿಯರು ದಾವಾ ಆಸ್ತಿಯ ಕುರಿತು ದಾಖಲಾತಿಗಳನ್ನು ತೆಗೆಸಿ ನೋಡಿದಾಗ ನಾವು ಖೊಟ್ಟಿಯಾಗಿ ದಾಖಲಾತಿಗಳನ್ನು ಸೃಷ್ಟಿಸಿರುವ ವಿಚಾರವು ವಾದಿಯರಿಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ವಾದಿಯರು ದಾವಾ ಆಸ್ತಿಗೆ ಮಾಲೀಕತ್ವವನ್ನು ಹೊಂದಿ ವಾದಿಯರು ದಾವಾ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿ ಇದ್ದರೂ ಕೂಡಾ ಅವರ ಸ್ವಾಧೀನಾನುಭವಕ್ಕೆ ನಾನು ವಿನಾಕಾರಣ ತೊಂದರೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

1 ನೇ **ಹೆಚ್ಚುವರಿ ಸಿವಿಲ್**
**ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬಸವನ ಬಾಗೇವಾಡಿ.**